# ಚಿಂತನ ಕಮ್ಮಟ – 2022

**ಚಿತ್ರದುರ್ಗ ಮೇ 26 :** ಬಸವಾದಿ ಶರಣರು ಬಾಹ್ಯ ಪ್ರಪಂಚದ ಸಂಪರ್ಕ ಕಡಿದುಕೊಂಡು ಅಂತರ್ಮುಖಿಯಾಗಿ ವಚನ ರಚನೆಯನ್ನು ಮಾಡಿದರು. ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಭೇದಿಸಲು ಆಗದ್ದನ್ನು ಶರಣರು ತತ್ವಜ್ಞಾನ ಮತ್ತು ಆಧ್ಯಾತ್ಮ ಜ್ಞಾನದಿಂದ ಭೇದಿಸಿದ್ದಾರೆ ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ನುಡಿದರು.

ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗು ಪರಿವರ್ತನಪರ ಧರ್ಮಸಂಸತ್ ವತಿಯಿಂದ ಕಾರವಾರ ಜಿಲ್ಲೆ ಉಳವಿಯಲ್ಲಿ ಆಯೋಜಿಸಲಾಗಿರುವ ಧಾರ್ಮಿಕರಿಗಾಗಿ ಚಿಂತನ ಕಮ್ಮಟ-2022 ಕಾರ್ಯಾಗಾರದಲ್ಲಿ ಸಹಜ ಶಿವಯೋಗ ಪ್ರಾತ್ಯಕ್ಷಿಕೆ ನೆರವೇರಿಸಿ, ಶುದ್ಧೀಕರಣ ನಂತರ ಉದಾತ್ತೀಕರಣ ವಿಷಯ ಕುರಿತು ಶ್ರೀಗಳು ಚಿಂತನ ನೀಡಿದರು.

ಶರಣರು ದಯಾಳುಗಳು, ಭವರೋಗ ವೈದ್ಯರು. ಸಾಂತ್ವನ, ಸಮಾಧಾನ, ಶಾಂತಿ, ಸಹನೆಗಳು ಸಾಧಕರಲ್ಲಿರಬೇಕಾಗುತ್ತದೆ. ಅವು ಬೇಕೆಂದರೆ ಅಂತರ್ಮುಖಿ ಸಾಧನೆಗೆ ಒಳಪಡಬೇಕು. ಶರಣರು ಧ್ಯಾನ, ಶಿವಯೋಗ ಸಾಧನೆಯಿಂದ ಅತೀಂದ್ರಿಯ ಶಕ್ತಿ ಸಾಧ್ಯವಾಗಿಸಿಕೊಂಡಿದ್ದರು. ಬಸವಣ್ಣ, ಚೆನ್ನಬಸವಣ್ಣ, ಅಥಣಿಯ ಮುರುಘೇಂದ್ರ ಶಿವಯೋಗಿಗಳಲ್ಲಿ ಅತೀಂದ್ರಿಯ ಶಕ್ತಿ ಇತ್ತು. ಶಿವಯೋಗ ಆಲೋಚನೆಗಳ ಶುದ್ಧೀಕರಣ ಮಾಡುತ್ತದೆ. ಅದರಿಂದ ಶರಣರು ಆಧ್ಯಾತ್ಮದ ಅನುಭೂತಿ ಮತ್ತು ಪರಮಾನುಭವವನ್ನು ಸಾಧಿಸಿದರು ಎಂದು ಹೇಳಿದರು.

ನಾವು ಶುದ್ಧೀಕರಣವಾಗಿ ನಂತರ ಉದಾತ್ತೀಕರಣ ಸಾಧಿಸಿದಾಗ ಉನ್ನತೀಕರಣವಾಗುವುದು. ಪಂಚೇಂದ್ರಿಯಗಳಿಗೆ ಅದ್ಭುತವಾದ ಶಕ್ತಿ ಇದೆ. ಬದುಕಿನಲ್ಲಿ ಇಂದ್ರಿಯಗಳನ್ನು ಉದಾತ್ತೀಕರಿಸಿ ಸಾಧನೆಗೆ ಬಳಸಿಕೊಂಡಾಗ ಬಹುಮುಖಿ ವ್ಯಕ್ತಿತ್ವದಿಂದ ನಮ್ಮ ಶಕ್ತಿ ಇಮ್ಮಡಿಯಾಗುತ್ತದೆ.

ಕೆಲವರು ಮೊಬೈಲ್‌ನಲ್ಲಿ ಅತಿಯಾಗಿ ಮಾತನಾಡುತ್ತ ಶಕ್ತಿಯ ಹರಣ ಮಾಡುತ್ತಾರೆ. ಯಾರು ಶಕ್ತಿಯನ್ನು ಹರಣ ಮಾಡಿಕೊಳ್ಳುತ್ತಾರೋ ಅವರಿಗೆ ವಿಚಾರಗಳು ಹೊಳೆಯುವುದಿಲ್ಲ. ವಿಚಾರ ಶೂನ್ಯರನ್ನಾಗಿ ಮಾಡುತ್ತದೆ. ವಿಚಾರ ಶೂನ್ಯತೆಯಿಂದ ಹೊರಗೆ ಬರಬೇಕಾದರೆ ಧ್ಯಾನ ಮಾಡುತ್ತಾ ಏಕಾಗ್ರತೆ ಸಾಧಿಸಬೇಕು. ಆಗ ವಿಚಾರಗಳು ಕಳೆಗಟ್ಟುತ್ತವೆ ಎಂದರು.

ಪರಿವರ್ತನಪರ ಧರ್ಮಸಂಸತ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಬಸವಮೂರ್ತಿ ಮಾದಾರಚೆನ್ನಯ್ಯ ಸ್ವಾಮಿಗಳು, ಅಥಣಿ ಶ್ರೀ ಗಚ್ಚಿನಮಠದ ಶ್ರೀ ಶಿವಬಸವ ಗುರುಮುರುಘರಾಜೇಂದ್ರ ಸ್ವಾಮಿಗಳು, ಗಾಣಿಗ ಗುರುಪೀಠದ ಡಾ. ಬಸವಕುಮಾರ ಸ್ವಾಮಿಗಳು ವೇದಿಕೆಯಲ್ಲಿದ್ದರು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ನೂರಾರು ಮಠಾಧೀಶರುಗಳು ಕಮ್ಮಟದಲ್ಲಿ ಭಾಗವಹಿಸಿದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು.

ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು ಸ್ವಾಗತಿಸಿ, ನಿರೂಪಿಸಿದರು.


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ-577502
ಧಾರ್ಮಿಕರಿಗಾಗಿ ಚಿಂತನ ಕಮ್ಮಟ-2022
ದಿನಾಂಕ : 25-05-2022 ರಿಂದ 26-05-2022 ರವರೆಗೆ
ಸ್ಥಳ : ಶ್ರೀ ಚನ್ನಬಸವೇಶ್ವರ ಮಹಾಮಠ, ಉಳವಿ, ಜೋಯಿಡಾ ತಾ||, ಕಾರವಾರ ಜಿ||
ಶರಣು, ಬನ್ನಿ


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ-577502
ಧಾರ್ಮಿಕರಿಗಾಗಿ ಚಿಂತನ ಕಮ್ಮಟ-2022
ದಿನಾಂಕ : 25-05-2022 ರಿಂದ 26-05-2022 ರವರೆಗೆ
ಸ್ಥಳ : ಶ್ರೀ ಚನ್ನಬಸವೇಶ್ವರ ಮಹಾಮಠ, ಉಳವಿ, ಜೋಯಿಡಾ ತಾ||, ಕಾರವಾರ ಜಿ||
ಶರಣು, ಬನ್ನಿ

